**ಸಾಕ್ಷಿಗೆ ದಿನಾಂಕಃ04-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ನೇ ಪ್ರತಿವಾದಿ ಪರ ಶ್ರೀ. KSH ವಕೀಲರಿಂದ ::**

ದಾವಾ ಶೆಡ್ಯೂಲ್ ಸ್ವತ್ತುಗಳು ನನಗೆ ಪಿತ್ರಾರ್ಜಿತವಾಗಿದ ಬಂದ ಸ್ವತ್ತುಗಳು ಎಂದರೆ ಸರಿ. ಸದರಿ ಆಸ್ತಿಯ ಖಾತೆಯು ನನಗೆ ಹಾಗೂ ನನ್ನ ಸಹೋದರರಿಗೆ ಪೌತಿ ಆಧಾರದಲ್ಲಿ ಬಂದಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನನ್ನ ಹಾಗೂ ನನ್ನ ಸಹೋದರರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನಗೆ ಹಾಗೂ ನನ್ನ ಸಹೋದರ ಸಹೋದರಿಯರಿಗೆ ಸಮಾನದ ಹಕ್ಕು ಇದ್ದು ಅದರಲ್ಲಿ ಭಾಗ ಕೊಡಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ.

ಸಾಕ್ಷಿಗೆ ಸರ್ವೇ ನಂಬರ್ 16 ಕ್ಕೆ ಸಂಬಂಧಪಟ್ಟ 1 ಪಹಣಿ ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ರ ಪ್ರಕಾರ 2 ನೇ ಪ್ರತಿವಾದಿ ಹಾಗೂ ಅವರ ಹೆಂಡತಿಯ ಹೆಸರಿಗೆ 2 ಎಕರೆ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಸಹ ನಮ್ಮ ಒಟ್ಟು ಕುಟುಂಬದ ಅಸ್ತಿ ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲೂ ಸಹ ನನಗೆ ಹಾಗೂ ನನ್ನ ಸಹೋದರ ಸಹೋದರಿಯರಿಗೆ ಸಮಾನದ ಹಕ್ಕು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಅದರಲ್ಲಿ ಯಾವುದೇ ಭಾಗ ಬೇಡ ಎಂದು ನುಡಿಯುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: